District Health & Family Welfare Office,
Udupi District,
Ajjarakadu, Udupi – 576101

e-mail:dhoudupi-hfws@karnataka.gov.in

ಕರ್ನಾಟಕ ಸರಕಾರ

ಆರೋಗ್ಯ ಇಲಾಖೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಛೇರಿ, ಉಡುಪಿ ಜಿಲ್ಲೆ,
ಅಜ್ಜರಕಾಡು,
ಉಡುಪಿ – 576101.
Ph No: 0820-2525566/2536650

**ಸಂಖ್ಯೆ : ಸಿಬ್ಬಂದಿ(2) : 130 : 2026-27** **ದಿನಾಂಕ: 27.07.2026.**

ಇವರಿಗೆ,

ಮಾನ್ಯ ಜಿಲ್ಲಾಧಿಕಾರಿಗಳು
ಉಡುಪಿ ಜಿಲ್ಲೆ, ಉಡುಪಿ.

ಮಾನ್ಯರೇ,

ವಿಷಯ : ಗುತ್ತಿಗೆಯ ಆಧಾರದ ಮೇಲೆ ಶುಶ್ರೂಷಾಧಿಕಾರಿ ಹುದ್ದೆಗಳನ್ನು ಅಯ್ಕೆಗೊಳಿಸುವ ಬಗ್ಗೆ ನೇರ ಸಂದರ್ಶನಕ್ಕೆ ಪತ್ರಿಕಾ ಪ್ರಕಟಣೆಯನ್ನು **udupi.nic.in** ವೆಬ್ ಸೈಟ್‌ನಲ್ಲಿ ಪ್ರಕಟಿಸುವ ಕುರಿತು.

ಉಲ್ಲೇಖ : ಆಯುಕ್ತರು ಮತ್ತು ಆರೋಗ್ಯ ಕು.ಕ. ಸೇವೆಗಳು, ಬೆಂಗಳೂರು ಇವರ ಆದೇಶ ಪತ್ರ ಸಂಖ್ಯೆ: ಇ-ಆಫೀಸ್ - 2152706 ದಿನಾಂಕ 10.07.2026.

******

ಈ ಮೇಲಿನ ಉಲ್ಲೇಖಿತ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಆಯುಕ್ತರು ಮತ್ತು ಆರೋಗ್ಯ ಕು.ಕ. ಸೇವೆಗಳು, ಬೆಂಗಳೂರು, ಇವರ ಕಛೇರಿಯ ಆದೇಶದಲ್ಲಿ ಉಡುಪಿ ಜಿಲ್ಲೆಗೆ 08 ಶುಶ್ರೂಷಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇರ ಸಂದರ್ಶನ ಮುಖಾಂತರ ಆಯ್ಕೆ ಮಾಡಲು ಅನುಮತಿ ನೀಡಿರುತ್ತಾರೆ. ಈ ಬಗ್ಗೆ ಈ ಪತ್ರದೊಂದಿಗೆ ಪತ್ರಿಕಾ ಪ್ರಕಟಣೆ ಲಗ್ತಿಕರಿಸಿದ್ದು ಇದನ್ನು **udupi.nic.in** ವೆಬ್ ಸೈಟ್‌ನಲ್ಲಿ ಪ್ರಕಟಿಸುವಂತೆ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

**ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿ**
**ಉಡುಪಿ ಜಿಲ್ಲೆ, ಉಡುಪಿ**

ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ
ಉಡುಪಿ

District Health & Family
Welfare Office,
Udupi District,
Ajjarakadu, Udupi – 576101
e-mail : dhoudupi-hfws@karnataka.gov.in

ಕರ್ನಾಟಕ ಸರ್ಕಾರ

GOVERNMENT OF KARNATAKA

ಆರೋಗ್ಯ ಇಲಾಖೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ
ಕಛೇರಿ,
ಉಡುಪಿ ಜಿಲ್ಲೆ,
ಅಜ್ಜರಕಾಡು, ಉಡುಪಿ – 576101.
Ph No: 0820-2985429/2536650

ಸಂಖ್ಯೆ : ಸಿಬ್ಬಂದಿ(2): 10/2026-27

ದಿನಾಂಕ :24.07.2026

## ಪತ್ರಿಕಾ ಪ್ರಕಟಣೆ

ಉಡುಪಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮಂಜೂರಾಗಿ ಖಾಲಿ ಇರುವ ಶುಶ್ರೂಷಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಮಾನ್ಯ ಆಯುಕ್ತರು ಆ.ಕು.ಕ ಸೇವೆಗಳು ಬೆಂಗಳೂರು ಇವರ ಪತ್ರ ಸಂಖ್ಯೆ : ಇ-ಆಫೀಸ್-2152706 ದಿ: 10.07.2026 ರ ಆದೇಶದಂತೆ ಅರ್ಹ ಆಸಕ್ತಿ ಅಭ್ಯರ್ಥಿಗಳು ದಿನಾಂಕ 05.08.2026 ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಕಚೇರಿಯಲ್ಲಿ ಜರಗುವ ನೇರಸಂದರ್ಶನಕ್ಕೆ ಈ ಕೆಳಗಿನ ದಾಖಲಾತಿಗಳೊಂದಿಗೆ ಹಾಜರಾಗುವುದು. ಅರ್ಜಿ ನಮೂನೆಯನ್ನು ಅದೇ ದಿನ ಈ ಕಛೇರಿಯಲ್ಲಿ ನೀಡಲಾಗುವುದು. ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು udupi.nic.in ಈ ವೆಬ್ ಸೈಟ್‌ನಲ್ಲಿ ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು ಹಾಗೂ ಆಯ್ಕೆಯಾದ ಅಭ್ಯರ್ಥಿಗಳಿಗೆ ಆಯ್ಕೆ ಆದೇಶವನ್ನು ಕಳುಹಿಸಿಕೊಡಲಾಗುವುದು.

| ಕ್ರ.ಸಂ. | ವಿವರ | ಪಡೆಯಬೇಕಾದ ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ಮಾಸಿಕ ಸಂಚಿತ ವೇತನ |
|---|---|---|---|---|
| 01 | ಶುಶ್ರೂಷಾಧಿಕಾರಿ | 08 | ನರ್ಸಿಂಗ್ ವಿದ್ಯಾರ್ಹತೆಯನ್ನು ಕರ್ನಾಟಕ ಸರಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ ಮಾತ್ರ ಪಡೆದಿರಬೇಕು ಹಾಗೂ ಕರ್ನಾಟಕ ನರ್ಸಿಂಗ್ ಕೌನ್ಸಿಲ್‌ನಲ್ಲಿ ನೋಂದಾಣಿಯಾಗಿರಬೇಕು. | ಕಾರ್ಮಿಕ ಇಲಾಖೆ ನಿಗದಿಪಡಿಸಿರುವ ಕನಿಷ್ಟ ವೇತನ |

**ಶುಶ್ರೂಷಾಧಿಕಾರಿಹುದ್ದೆಗೆ ಬೇಕಾಗಿರುವ ದಾಖಲೆಗಳು:**

ಎಸ್.ಎಸ್.ಎಲ್.ಸಿ / ಪಿ.ಯು.ಸಿ ಅಂಕಪಟ್ಟಿ,

ಶುಶ್ರೂಷಾಧಿಕಾರಿ ತರಬೇತಿ ವರ್ಷವಾರು ಅಂಕ ಪಟ್ಟಿ

ಕರ್ನಾಟಕ ನರ್ಸಿಂಗ್ ಕೌನ್ಸಿಲ್ ನೋಂದಾಣಿ ಪ್ರಮಾಣ ಪತ್ರ,

ಇತ್ತೀಚಿನ ಜಾತಿ ಪ್ರಮಾಣ ಪತ್ರ, ಕನ್ನಡ ಭಾಷಾ ಪ್ರಮಾಣ ಪತ್ರ, ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ,

ಅಂಗವಿಕಲರಾಗಿದ್ದಲ್ಲಿ ಪ್ರಮಾಣ ಪತ್ರ,

ಆಧಾರ್ ಕಾರ್ಡ್,

ಎಲ್ಲಾ ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸುವುದು.

ಸೂಚನೆ: ನೇಮಕಾತಿಯನ್ನು ರೋಸ್ಟರ್ ಮತ್ತು ಮೆರಿಟ್ ನಿಯಮಗಳನ್ನು ಅನುಸರಿಸಿ ಮಾಡಲಾಗುವುದು.

ವಯೋಮಿತಿ: ಅಭ್ಯರ್ಥಿಗಳು 45 ವರ್ಷ ಮೀರಿರಬಾರದು.

ಷರಾ : ಮೀಸಲಿರಿಸಿದ ವರ್ಗದಲ್ಲಿ ಅಭ್ಯರ್ಥಿಯು ಲಭ್ಯವಿಲ್ಲದಿದ್ದಲ್ಲಿ ಮುಂದಿನ ರೋಸ್ಟರ್ ಬಿಂದುವಿನ ಅಭ್ಯರ್ಥಿಯನ್ನು ಪರಿಗಣಿಸಲಾಗುವುದು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಅಧಿಕಾರಿ,
ಉಡುಪಿ ಜಿಲ್ಲೆ, ಉಡುಪಿ

ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ
ಉಡುಪಿ